# ಆದರ್ಶ ಕುಟುಂಬ

**ಕು**ಟುಂಬವರ್ಗದವರೆಲ್ಲರೂ ಅಂದರೆ ತಂದೆ-ತಾಯಿ, ಮಗ-ಮಗಳು, ಅಕ್ಕ – ತಂಗಿ, ಅಣ್ಣ – ತಮ್ಮ, ಅತ್ತೆ – ಸೊಸೆ, ಅತ್ತೆ-ಮಾವ, ಗಂಡ – ಹೆಂಡತಿ, ಹೀಗೆ ಎಲ್ಲರೂ ಅನ್ಯೋನ್ಯವಾಗಿದ್ದುಕೊಂಡು, ಅವರವರ ಕರ್ತವ್ಯವನ್ನು ಅರಿತುಕೊಂಡು ಜೀವನ ರಥವನ್ನು ಮುನ್ನಡೆಸಿಕೊಂಡು ಹೋದಲ್ಲಿ ಮಾತ್ರ ಅಂತಹ ಕುಟುಂಬವನ್ನು ಆದರ್ಶ ಕುಟುಂಬವೆಂದು ಹೇಳಬಹುದು. ಮಕ್ಕಳನ್ನು ಉನ್ನತ ಪ್ರಜೆಗಳನ್ನಾಗಿ ಮಾಡುವ ಕರ್ತವ್ಯ ತಂದೆ-ತಾಯಿಯರಿಗೆ ಸೇರಿದ್ದು. ಮಕ್ಕಳು ಬುದ್ಧಿವಂತರಾಗಲು ಅವರಿಗೆ ಚಿಕ್ಕಂದಿನಿಂದಲೂ ಉತ್ತಮವಾದ ಶಿಕ್ಷಣವನ್ನು ಮನೆಯಲ್ಲಿಯೇ ಕೊಡಬೇಕು. ಪತ್ನಿಯು ಮಧುರಭಾಷಿಣಿಯಾಗಿರಬೇಕು. ಸಂದರ್ಭೋಚಿತವಾಗಿ ಮಾತನಾಡುವುದು, ಇನ್ನೊಬ್ಬರಿಗೆ ನೋವಾಗದಂತೆ ವರ್ತಿಸುವುದು, ಎಲ್ಲರನ್ನೂ ಒಂದೇ ರೀತಿ ಭೇದಭಾವನೆಯಿಲ್ಲದೆ ನೋಡಿಕೊಳ್ಳುವುದು – ಇತ್ಯಾದಿ ಪತ್ನಿಯಾದವಳ ಕರ್ತವ್ಯ.

ಆದರೆ ಇಂದಿನ ಹೊಸ ಸಮಾಜವ್ಯವಸ್ಥೆಯಲ್ಲಿ 'ಮನೆ' ನಿಧಾನವಾಗಿ ಕುಸಿದು ಬೀಳುತ್ತಿದೆ. ಮನೆ ಇರುತ್ತದೆ, ಎಲ್ಲ ರೀತಿಯ ಸುಖಸಾಧನಗಳು ಇರುತ್ತವೆ. ಅಲ್ಲಿ ಹೆಂಗಸು ಇರುತ್ತಾಳೆ, ಗೃಹಿಣಿ ಇರುವುದಿಲ್ಲ. ಅದು ಮನೆಯಾಗಿರುವುದಿಲ್ಲ, ಪ್ರವಾಸಿ ಮಂದಿರವಾಗಿರುತ್ತದೆ; ಅಲ್ಲಿ ಸಂಸ್ಕಾರವಿಲ್ಲ, ಕೇವಲ ಸೌಕರ್ಯವಿದೆ. ಅಲ್ಲಿ ಇರುವುದು ಅಡಿಗೆಮನೆಯಲ್ಲ, ಹೋಟೆಲು ಮಾತ್ರ.

ಮನೆಯೆಂದರೆ ಪ್ರಾತಃಸ್ಮರಣೆ, ಉದಯರಾಗ, ತುಳಸೀಪೂಜೆ, ಭಜನೆ, ಹಬ್ಬ-ಹರಿದಿನಗಳು ಇರಬೇಕು. ಗೃಹಿಣಿಯ ತೇಜಸ್ಸಿನಿಂದ ಇಡೀ ಮನೆಯು 'ಜಗಜಗನೆ ಬೆಳಗಬೇಕು.' ಮಕ್ಕಳಿಗೆ ಸಂಸ್ಕಾರ, ಗಂಡನಿಗೆ ಪ್ರೇರಣೆ, ಅತಿಥಿಗಳಿಗೆ ಆದರ, ಹಿರಿಯರಿಗೆ ಗೌರವ ನೀಡುವ ಗೃಹಿಣಿಯರು ಇಂದು ಎಷ್ಟು ಜನ ತಾನೆ ಇದ್ದಾರೆ?

ಕುಟುಂಬದ ಸದಸ್ಯರೆಲ್ಲರೂ ಮಾತೃಭಕ್ತಿ, ಪಿತೃಭಕ್ತಿ, ಭ್ರಾತೃಪ್ರೇಮ, ಕೃತಜ್ಞತೆ, ಕ್ಷಮೆ, ಪ್ರೀತಿ, ವಾತ್ಸಲ್ಯ, ನಿರ್ಭಯತೆ, ಧರ್ಮಪಾಲನೆ, ಜಾಗರೂಕತೆ ಮೊದಲಾದ ಗುಣಗಳನ್ನು ತಮ್ಮ ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದಲ್ಲಿ ಮಾತ್ರ ಅಂತಹ ಕುಟುಂಬ 'ಆದರ್ಶ ಕುಟುಂಬ' ವೆಂದೆನಿಸಿಕೊಳ್ಳಲು ಸಾಧ್ಯವೆಂದರೆ ತಪ್ಪಾಗಲಾರದು.

**–ಬೇ. ನ. ಶ್ರೀ. ಮೂರ್ತಿ, ತುಮಕೂರು**

**ಒಂ**ದು ಕುಟುಂಬದ ವ್ಯಾಪ್ತಿಯಲ್ಲಿ ನಾವು ತಾಯಿ-ತಂದೆ, ಅಜ್ಜಿ- ತಾತ, ಮಕ್ಕಳು ಮೊಮ್ಮಕ್ಕಳನ್ನು ನೋಡಬಹುದು. ರೈತರು ದೇಶದ ಬೆನ್ನೆಲುಬಾಗಿರುವಂತೆ ಆದರ್ಶ ಕುಟುಂಬಗಳು ಸಮಾಜದ ಬೆನ್ನೆಲುಬಾಗಿವೆ. ಕುಟುಂಬದಲ್ಲಿ ಮಕ್ಕಳು ಹಿರಿಯವರನ್ನು ಅನುಕರಣೆ ಮಾಡಿ ಕಲಿಯಬೇಕು; ಅದಕ್ಕಾಗಿ ಹಿರಿಯರು ಪವಿತ್ರ ಜೀವನವನ್ನು ನಡೆಸಲೇಬೇಕಾಗಿದೆ! ಬಾಲ್ಯದಲ್ಲಿ ಮಕ್ಕಳಿಗೆ ಸದ್ಗುಣಗಳೆಂಬ ಮಹಾ ಸಂಪತ್ತನ್ನು ನೀಡಬೇಕಾಗಿದೆ. ದೇವರಲ್ಲಿ ಭಕ್ತಿ, ಶುಚಿತ್ವ, ಸತ್ಯನಿಷ್ಠೆ ಹಿರಿಯರಲ್ಲಿ ಗೌರವ, ನುಡಿದಂತೆ ನಡೆಯುವುದು, ತ್ಯಾಗ, ದಾನ, ಧರ್ಮ ಮುಂತಾದ ದೈವೀಗುಣಗಳನ್ನು ಹಿರಿಯರು ಸ್ವತಃ ಆಚರಿಸಿದಾಗ, ಕಿರಿಯರು ಅನುಕರಣೆ ಮಾಡುವುದಂತೂ ಸತ್ಯ. ಶ್ರೀರಾಮಚಂದ್ರನ ಪಿತೃಭಕ್ತಿ, ಯುಧಿಷ್ಠಿರನ ಸತ್ಯಸಂಧತೆ, ಬಾಲಕ ನಚಿಕೇತನ ಶ್ರದ್ಧೆ – ಇಂಥ ಅನುಪಮ ಕಥೆಗಳ ಮೂಲಕ ಕಿರಿಯರಲ್ಲಿ ವಿವೇಕಪ್ರಜ್ಞೆಯನ್ನು ತಿಳಿಹೇಳುವ ತಾಯಿತಂದೆಯರು ಸಮಾಜದ ಮುಕುಟಮಣಿಗಳೇ ಅಲ್ಲವೆ?

ಶ್ರೀರಾಮಕೃಷ್ಣರೆನ್ನುತ್ತಾರೆ, "ಯಾವ ರೀತಿಯಲ್ಲಿ ಹೆಂಚಿನ ಕಾರ್ಖಾನೆಗಳಲ್ಲಿ ಹೆಂಚುಗಳು ಮೃದುವಾಗಿರುವಾಗಲೇ ಮುದ್ರೆಯನ್ನು ಒತ್ತುತ್ತಾರೋ ಅದೇ ರೀತಿಯಲ್ಲಿ ಕುಸುಮ ಕೋಮಲ ಹೃದಯದ ಮಕ್ಕಳಿಗೆ ಸದ್ಗುಣಗಳೆಂಬ ಮುದ್ರೆಯನ್ನು ಒತ್ತಬೇಕು." ಈ ಅವತಾರಪುರುಷರ ಅಮರ ಸಂದೇಶವನ್ನು ಇಂದು ಎಷ್ಟು ಕುಟುಂಬಗಳು ತಾನೆ ಅನುಷ್ಠಾನಕ್ಕೆ ತಂದಿವೆ ಎಂದು ನಾವು ಚಿಂತನ-ಮಂಥನ ಮಾಡಬೇಕಾಗಿದೆ.

ಆದರ್ಶ ಕುಟುಂಬಗಳ ಅಭಾವದಿಂದಾಗಿ ಅಸತ್ಯ, ಅಶಾಂತಿ, ಅಶಿಸ್ತು ಮೊದಲಾದ ಆಸುರೀ ಗುಣಗಳು ಲಂಗುಲಗಾಮಿಲ್ಲದೆ ವಿಜೃಂಭಿಸುತ್ತ, ಸಮಾಜದ ಸರ್ವನಾಶಕ್ಕೆ ಕಾರಣವಾಗಿವೆ. ಆದರ್ಶ ಕುಟುಂಬಗಳು ಸತ್ಯ, ಶಾಂತಿ, ಶಿಸ್ತುಗಳೇ ಮೊದಲಾದ ದೈವೀಗುಣಗಳ ಸ್ರೋತವನ್ನು ನಿರಂತರ ಪ್ರವಹಿಸಿ, ಕಲುಷಿತಗೊಂಡಿರುವ ಸಮಾಜವನ್ನು ಸ್ವಚ್ಛಗೊಳಿಸಲು ಶಕ್ತವಾಗುವುವು. ಹೀಗಾದಲ್ಲಿ ಮಾತ್ರ ನಮ್ಮ ಸನಾತನ ಧರ್ಮಕ್ಕೆ ಉಳಿವು ಸಾಧ್ಯ.

**–ಕುಮಾರಿ ಸುಂದರಿ ಮಾದಪ್ಪ,**
**ವಿವೇಕಾನಂದ ಜ್ಞಾನವಾಹಿನಿ ಕೇಂದ್ರ, ಹೊಯಿಸಲ್ಲೂರು, ಕೊಡಗು**

**ಕು**ಟುಂಬದ ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ, ಇನ್ನುಳಿದ ಆತ್ಮೀಯ ಬಂಧು ಬಳಗದವರು ಸಂಸಾರದ ಸಮಸ್ಯೆಗಳನ್ನು ಒಬ್ಬರಿಗೊಬ್ಬರು ಹೇಳಿಕೊಂಡು ಚರ್ಚಿಸಿ, ಸುಲಭವಾಗಿ ಪರಿಹರಿಸುತ್ತ ಹೋದರೆ ಅದೊಂದು ಆದರ್ಶ ಕುಟುಂಬವಾಗದೇ ಇದ್ದೀತೆ? **'ವಸುಧೈವ ಕುಟುಂಬಕಂ' – ಇಡೀ ಪ್ರಪಂಚವೇ ಒಂದು ಕುಟುಂಬ** ಎಂದು ಸಾರುವ ಭಾರತೀಯ ಸಂಸ್ಕೃತಿಯಲ್ಲಿ ಬೆಳೆದ ನಾವು ಇದನ್ನು ತಿಳಿದುಕೊಂಡು ನಡೆದಾಗ ಎಲ್ಲರಿಗೂ ಸುಖ, ಶಾಂತಿ ಹಾಗೂ ನೆಮ್ಮದಿ. ಆದರೆ ಈಗಿನ ದಿನಗಳಲ್ಲಿ ಎಲ್ಲರಿಗೂ ಗಡಿಬಿಡಿ, ಎಲ್ಲದಕ್ಕೂ ಧಾವಂತ! ಕೆಲಸ ಮಾಡುವಾಗಲೂ ತಿನ್ನುಣ್ಣುವಾಗಲೂ. ಇಷ್ಟೇ ಅಲ್ಲ ಮನೆಯವರ ಸಂಗಡ ಮಾತನಾಡಲೂ ಕುಟುಂಬದ ಸದಸ್ಯರಿಗೆ ವೇಳೆಯೇ

ಇಲ್ಲ. ಇದಕ್ಕೆ ಏನು ಕಾರಣ ಇರಬಹುದೆಂದು ಮನೆಯ ಹಿರಿಯರಾದ ನಮಗೆ ಚಿಂತೆಯಾಗುತ್ತಲಿದೆ. ಒಂದು ವೇಳೆ ಈಗಲೇ ಹೀಗಾದಲ್ಲಿ ಇವರೆಲ್ಲರ ಮುಂದಿನ ಭವಿಷ್ಯವೇನು?

ಜೀವನವೆಂದ ಮೇಲೆ ಸ್ವಲ್ಪವಾದರೂ ಶಾಂತಿ ನೆಮ್ಮದಿ ಇರಲೇ ಬೇಕಲ್ಲವೆ? ಅದಕ್ಕಾಗಿ ಸತ್ಸಂಗವನ್ನು ಮಾಡಬೇಕು. ಕೆಲವು ನಿಮಿಷಗಳಾದರೂ ಕುಟುಂಬದ ಸದಸ್ಯರು ಭಗವಂತನ ನಾಮ ಸ್ಮರಣೆಯಲ್ಲಿ ಕಾಲ ಕಳೆಯಬೇಕು. ಭಜನೆ, ಕೀರ್ತನೆಯಲ್ಲಿ ಮನಸ್ಸು ತೊಡಗಿದಾಗ ನಮಗೂ ಹಿತ ಮತ್ತು ನೆರೆಹೊರೆಯವರ ಸಂಗಡ ಆತ್ಮೀಯರಾಗಿ ಇರಲೂ ಸಾಧ್ಯವಾಗುವುದು. ಮನಸ್ಸು ಪ್ರಾಪಂಚಿಕ ಸುಖದಲ್ಲಿ ಲೀನವಾಗಿ ಸತ್ಯದ ಅರಿವನ್ನು ಮರೆತು ಬಿಟ್ಟಿದೆ. ಹಾಗಾಗದಂತೆ ನೋಡಿಕೊಳ್ಳಿರಿ, ನನ್ನ ಆತ್ಮೀಯ ಬಾಂಧವರೇ! ಮನುಷ್ಯ ಜನ್ಮ ಸಿಗುವುದು ದುರ್ಲಭವಂತೆ. ಅದು ಸಿಕ್ಕಾಗ ಅದನ್ನು ವ್ಯರ್ಥಮಾಡಿಕೊಳ್ಳದೆ ಆದರ್ಶರಾಗಿ ಬಾಳಿ ಕುಟುಂಬದ ನೆಮ್ಮದಿಯನ್ನು ಕಾಪಾಡಿಕೊಳ್ಳಿರಿ.

ಇದಕ್ಕಾಗಿ ಶ್ರೀರಾಮಕೃಷ್ಣ ಪರಮಹಂಸರು, ಶ್ರೀಶಾರದಾ ಮಾತೆ ಮತ್ತು ಸ್ವಾಮಿ ವಿವೇಕಾನಂದರ ಜೀವನಚರಿತ್ರೆಗಳನ್ನು ಅಧ್ಯಯನ ಮಾಡಿ. ಈ ಮಹಾತ್ಮರು ವಿಶ್ವವೇ ಒಂದು ಕುಟುಂಬ ಎಂದು ತಿಳಿದು, ಬಂದ ಸಮಸ್ಯೆಗಳನ್ನು ಎದುರಿಸಿ ಧೈರ್ಯದಿಂದ ಬಾಳಿ ಬದುಕಿ, ಜಗತ್ತಿಗೇ ಆದರ್ಶ ವ್ಯಕ್ತಿಗಳಾಗಿ ಹೋದರಲ್ಲವೇ? ಅಂತಹದರಲ್ಲಿ ನಮಗೇಕೆ ಸಾಧ್ಯವಿಲ್ಲ ಎಂದರಿತು ಕುಟುಂಬದ ನೆಮ್ಮದಿಯನ್ನು ಕಾಪಾಡಿಕೊಳ್ಳುವುದು ನಿಮ್ಮ ಕೈಯಲ್ಲಿಯೇ ಇದೆ. 'ಮನಸ್ಸಿದ್ದಲ್ಲಿ ಮಾರ್ಗ.'

ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ ಹೇಳಿದಂತೆ,

**ಶಕ್ನೋತೀಹೈವ ಯ: ಸೋಢುಂ ಪ್ರಾಕ್ಶರೀರವಿಮೋಕ್ಷಣಾತ್ ।**
**ಕಾಮಕ್ರೋಧೋದ್ಭವಂ ವೇಗಂ ಸ ಯುಕ್ತ: ಸ ಸುಖೀ ನರ: ॥**

ಯಾವನು ತನ್ನ ದೇಹವು ಬೀಳುವ ಮೊದಲು, ಕಾಮ ಮತ್ತು ಕ್ರೋಧಗಳ ಆವೇಗವನ್ನು ನಿಯಂತ್ರಿಸಲು ಶಕ್ತನಾಗುತ್ತಾನೋ, ಅವನೇ ಸುಖಿಯಾದ ಮನುಷ್ಯ.

ಇದನ್ನು ತಿಳಿದುಕೊಂಡು ನಡೆದರೆ ನಿಜಕ್ಕೂ ಅಂತಹ ಮನುಷ್ಯ ಸುಖವಾಗಿ ಬಾಳುತ್ತಾನೆ. ಪ್ರತಿ ದಿನ ಶ್ರೀಮದ್ಭಗವದ್ಗೀತೆಯ ಪಠಣ ಮಾಡುವುದು ಸುಖಸಂಸಾರಕ್ಕೂ ಆದರ್ಶಕುಟುಂಬಕ್ಕೂ ಸಂಜೀವಿನಿ ಇದ್ದಂತೆ. **– ಉಮಾ ಪದಕಿ, ಅಮೇರಿಕ**

ಒಂದು ಕುಟುಂಬವನ್ನು ನಾವು ಕಠೋಪನಿಷತ್ತಿನಲ್ಲಿ ಬರುವ ರಥರೂಪಕದ ಕಲ್ಪನೆಗೆ ಹೋಲಿಸಬಹುದು. ಇಲ್ಲಿ ಕುಟುಂಬವೇ ಶರೀರ; ಕುಟುಂಬದ ಆದರ್ಶವೇ ಆತ್ಮ; ಕುಟುಂಬದ ಮುಖ್ಯಸ್ಥನೇ ಸಾರಥಿ; ಅವನಲ್ಲಿರುವ ಧನ ಇತ್ಯಾದಿ ಸೌಲಭ್ಯಗಳೇ ಕಡಿವಾಣ; ಕುಟುಂಬದ ಸದಸ್ಯರೇ ಕುದುರೆಗಳು. ಸಾರಥಿಯ ಹತೋಟಿಯಲ್ಲಿ ಕುದುರೆಗಳು ಇದ್ದರೆ ರಥ ಎಷ್ಟು ದೂರ ಬೇಕಾದರೂ ಸಾಗಿ ತನ್ನ ಗುರಿಯನ್ನು ಸರಾಗವಾಗಿ ಸೇರುವುದು. ಇಲ್ಲದೇ ಇದ್ದರೆ, ಗುರಿ ಸೇರುವುದೇ ಇಲ್ಲ. ಹೀಗೆ ಆಧ್ಯಾತ್ಮಿಕ ತಳಹದಿಯ ಮೇಲೆ ನಡೆಯುತ್ತಿದ್ದರೆ ಮಾತ್ರ ಒಂದು ಕುಟುಂಬ 'ಆದರ್ಶ ಕುಟುಂಬ' ವಾಗಬಲ್ಲುದು.

ಹಿಂದಿನ ದಿನಗಳಲ್ಲಿ ತ್ಯಾಗ, ಪ್ರೀತಿ, ಸಹಬಾಳ್ವೆ, ನಿಸ್ವಾರ್ಥತೆ – ಇವು ಕುಟುಂಬದಲ್ಲಿ ಎದ್ದು ಕಾಣಿಸುತ್ತಿದ್ದವು. ಅಲ್ಲಿ ಪುರಾತನ ಭಾರತೀಯ ಸಂಸ್ಕೃತಿ ಬಿಂಬಿತವಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಭೋಗಪ್ರಧಾನವಾದ ಕುಟುಂಬಗಳು ಕಾಣಿಸಿಕೊಳ್ಳುತ್ತಿವೆ. ಆಧುನಿಕತೆಯ ಹೆಸರಿನಲ್ಲಿ ಪಾಶ್ಚಾತ್ಯ ಸಂಸ್ಕೃತಿ ನಮ್ಮ ಕುಟುಂಬವನ್ನು ಹೊಕ್ಕುಬಿಟ್ಟಿದೆ. ಭಾರತೀಯ ಕುಟುಂಬಗಳು ಈಗ ಪಾಶ್ಚಾತ್ಯ ಕುಟುಂಬಗಳಾಗಿ ಪರಿವರ್ತನೆ ಹೊಂದುತ್ತಿರುವ ಲಕ್ಷಣಗಳು ಕಂಡುಬರುತ್ತಿವೆ. ಈಗಲೇ ನಾವು ಎಚ್ಚರಗೊಳ್ಳದಿದ್ದರೆ ಮುಂದೆ ಭಯಾನಕ ವಾತಾವರಣದ ಸೃಷ್ಟಿ ಆಗುವುದರಲ್ಲಿ ಸಂದೇಹವಿಲ್ಲ.

ಈಗಿನ ಬಹುತೇಕ ಕುಟುಂಬಗಳಲ್ಲಿ ಕೇವಲ ಹಣದಿಂದಲೇ ಕುಟುಂಬದ ಹಿತ ಎಂಬ ಕಲ್ಪನೆ ಇದೆ. ಇದು ಈಗಿನ ಹಣ ದುಬ್ಬರದ ದೃಷ್ಟಿಯಿಂದ ನೋಡಿದರೆ ಸರಿ ಎನ್ನಿಸಬಹುದು. ಆದರೆ ಕೇವಲ ಹಣವೇ ಮುಖ್ಯವೇ? ಈ ಹಣ ನಮಗೆ ಸರಿಯಾದ ಪ್ರಾಮಾಣಿಕ ಮಾರ್ಗದಿಂದ ಬರುತ್ತಿದೆಯೆ? ಈ ಹಣ ನಮ್ಮ ಕುಟುಂಬಕ್ಕೆ ಸರಿಯಾದ ರೀತಿಯಲ್ಲಿ ವಿನಿಯೋಗ ವಾಗುತ್ತಿದೆಯೇ ಅಥವಾ ಕೇವಲ ಭೋಗಕ್ಕೆ ಮತ್ತು ಇನ್ನೊಬ್ಬರ ಹತ್ತಿರ ದೊಡ್ಡಸ್ತಿಕೆಯನ್ನು ತೋರಿಸುವ ಸಲುವಾಗಿ ವಿನಿಯೋಗ ವಾಗುತ್ತದೆಯೆ? ಕುಟುಂಬದ ಕಡೆಗೆ ಲಕ್ಷ್ಯವಿಲ್ಲದೆ ಕೇವಲ ಹಣ ಸಂಗ್ರಹದ ಕಡೆಗೇ ನಮ್ಮ ಗಮನ ಹೆಚ್ಚಾದರೆ, ಅಂತಹ ಕುಟುಂಬ ಪತನವಾಗುವ ಸಾಧ್ಯತೆಗಳಿರುತ್ತವೆ. ಈ ದೃಷ್ಟಿಯಲ್ಲಿ ಕುಟುಂಬದ ಮುಖಂಡರು ಮೊದಲು ಆದರ್ಶವನ್ನು ಪಾಲಿಸಿದರೆ ಮಾತ್ರವೇ ಉಳಿದ ಸದಸ್ಯರು ಅವರನ್ನು ಅನುಸರಿಸುವರು.

ಆದರ್ಶ ಕುಟುಂಬವಾಗಬೇಕಾದರೆ ಕುಟುಂಬದ ನಿರ್ವಹಣೆಗೆ ಹಣವನ್ನು ಸರಿಯಾದ ರೀತಿಯಲ್ಲಿ ಸದ್ವಿನಿಯೋಗ ಮಾಡಿ. ವಿವೇಕಾನಂದರು ಹೇಳಿದಂತೆ ಪುರುಷಸಿಂಹರಾಗುವಂತಹ ಶಿಕ್ಷಣವನ್ನು ನಿಮ್ಮ ಮಕ್ಕಳಿಗೆ ಕೊಡಿಸಿ. ಕೇವಲ ಹಣ ಗಳಿಕೆಗಾಗಿ ವಿದ್ಯೆ ಬೇಡ.

ಆಧ್ಯಾತ್ಮಿಕ ತಳಹದಿಯ ಮೇಲೆ ನಿಂತಿರುವ ಕುಟುಂಬವೇ ಆದರ್ಶ ಕುಟುಂಬ. ನಿಮ್ಮ ಕುಟುಂಬದಲ್ಲಿ ಆದಷ್ಟು ಹೆಚ್ಚು ಹೆಚ್ಚಾಗಿ ಆಧ್ಯಾತ್ಮಿಕತೆಯನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿ. ಆದರ್ಶ ಕುಟುಂಬದಿಂದ ಆದರ್ಶ ಸಮಾಜ; ಆದರ್ಶ ಸಮಾಜ ದಿಂದ ಆದರ್ಶ ರಾಜ್ಯ; ಆದರ್ಶ ರಾಜ್ಯಗಳಿಂದ ಆದರ್ಶ ದೇಶ; ಆದರ್ಶ ದೇಶಗಳಿಂದ ಆದರ್ಶ ವಿಶ್ವ ರೂಪುಗೊಳ್ಳಲಿ ಎಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ.

**– ರಾಜೇಶ ನಾ. ಪತ್ತಾರ, ಬೆಳಗಾವಿ**

(ಮುಂದುವರಿಯುವುದು)